**ಪತ್ರಿಕಾ ಪ್ರಕಟಣೆ**
**28ನೇ ಅಕ್ಟೋಬರ್ 2015**

**ಕೇಂದ್ರ ಮಾಹಿತಿ ಆಯೋಗವು ಪರಿಸರ ಮತ್ತು ಅರಣ್ಯ ಸಚಿವಾಲಯ ಕರ್ನಾಟಕ ಸರ್ಕಾರಕ್ಕೆ, ಕರ್ನಾಟಕದ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿನಲ್ಲಿ ಯೋಜಿಸಿರುವ ಪರಮಾಣು ಮಿಲಿಟರಿ ಕೈಗಾರಿಕೆ ಸಂಕೀರ್ಣ ಅಭಿವೃದ್ಧಿಗೆ ಸಂಬಂಧಿಸಿದಂತೆ ಸಾರ್ವಜನಿಕ ಮಾಹಿತಿ ಬಿಡುಗಡೆ ಮಾಡುವಂತೆ ನಿರ್ದೇಶಿಸಿದೆ.**

**ಸಾರ್ವಜನಿಕರಿಗೆ ಮಾಹಿತಿ ನೀಡದೆ ಹಾಗೂ ದಾರಿ ತಪ್ಪಿಸಿರುವುದನ್ನು ಖಂಡಿಸಿ ಸಚಿವಾಲಯಕ್ಕೆ ದಂಡ ವಿಧಿಸಿದೆ.**

ಎನ್‌ವರಿನ್‌ಮೆಂಟ್ ಸಪೋರ್ಟ್ ಗ್ರೂಪ್ ಕರ್ನಾಟಕ ರಾಜ್ಯದ ಚಿತ್ರದುರ್ಗ ಜಿಲ್ಲೆಯ, ಚಳ್ಳಕೆರೆ ತಾಲ್ಲೂಕಿನ ಸೂಕ್ಷ್ಮ ಪರಿಸರ ಅಮೃತ್ ಮಹಲ್ ಕಾವಲ್ ಹುಲ್ಲುಗಾವಲ್ಲಿನ ಪ್ರದೇಶದಲ್ಲಿ ಭಾರೀ ಪರಮಾಣು ಮಿಲಿಟರಿ ಕೈಗಾರಿಕೆ ಸಂಕೀರ್ಣ ಅಭಿವೃದ್ಧಿಪಡಿಸುವ ನಿರ್ಧಾರವನ್ನು ಪ್ರಶ್ನಿಸಿ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ದಕ್ಷಿಣ ವಲಯ, ಚೆನ್ನೈ) ಗೆ ಒಂದು ಸಾರ್ವಜನಿಕ ಹಿತಾಸಕ್ತಿಯ ಅರ್ಜಿ ಸಲ್ಲಿಸಿದೆ, ಈ ಯೋಜನೆಯು ಭೂಮಿಯ ಬಳಕೆ, ಸೈಟಿಂಗ್, ಪರಿಸರ ಮತ್ತು ವನ್ಯಜೀವಿ ರಕ್ಷಣೆ ಕಾನೂನುಗಳ ಸಮಗ್ರ ಉಲ್ಲಂಘನೆಯಾಗಿದೆ ಮತ್ತು ಒಟ್ಟು ಗೌಪ್ಯವಾಗಿದೆ ಎಂದು ವಾದಿಸಿದೆ.

ಈ ನ್ಯಾಯಮಂಡಳಿಯು 27ನೇ ಆಗಸ್ಟ್ 2014ರಂದು ತನ್ನ ನಿರ್ಧಾರವು ಪರಿಸರ ಮತ್ತು ಅರಣ್ಯ (ಒಒಇಈ) ಮತ್ತು ಕರ್ನಾಟಕ ಸರ್ಕಾರ ಸಚಿವಾಲಯಕ್ಕೆ ನಿರ್ದೇಶಿಸಿ ಈ ಯೋಜನೆಗಳು ಕಾನೂನು ಪ್ರಕಾರ ಮತ್ತು ತೆರವು ಪರಿಸ್ಥಿತಿಗೆ ಅನುಗುಣವಾಗಿ ಇರುವುದು ಖಾತರಿಯಾದಾಗ ಮಾತ್ರ ಯೋಜನೆಗಳು ಮುಂದುವರಿಯಲು ಅವಕಾಶ ನೀಡಬೇಕೆಂದು ಮತ್ತು ಸರಿ ಮತ್ತು ಅಳೆಯಬಹುದಾಗಿರಬೇಕು ಹಾಗೂ ಸಾರ್ವಜನಿಕ ಪುರ್ನವಿಮರ್ಶಗೆ ತೆರೆದಿರಬೇಕು.

ನ್ಯಾಯಮಂಡಳಿಯು ಸ್ಥಳೀಯ ಗ್ರಾಮೀಣ ಕೃಷಿ ಸಮುದಾಯಗಳು, ಕಸುಬುದಾರರು ಯೋಜನೆಯ ಪ್ರತಿಪಾದಕರಿಂದ 10000 ಎಕರೆಯ ಕಾವಲ್ ವರ್ಗಾವಣೆಯಾದ್ದರಿಂದ ಸಮುದಾಯಗಳು ಅನುಭವಿಸಿದ ಸಾಂಸ್ಕೃತಿಕ, ಆರ್ಥಿಕ ಮತ್ತು ಸಾಮಾಜಿಕ ಹಕ್ಕುಗಳನ್ನು ಪ್ರಸ್ತಾಪಿಸಲು ನಿರ್ಧರಿಸಿದರು ಮತ್ತು ಯೋಜನೆಯ ಪ್ರತಿಪಾದಕರಿಗೆ ಗೋಡೆಗಳನ್ನು ನಿರ್ಮಿಸಬಾರದು ಮತ್ತು ಅದರಿಂದ 70 ಹಳ್ಳಿಗಳ ಜನರು ನೀರಿಗೆ ಆಶ್ರಯಿಸಿದ್ದು, ಅವರ ಜೀವನದ ಹಾಗೂ ಜೀವನೋಪಾಯದ ಹಕ್ಕುಗಳಿಗೆ ತಡೆಯೊಡ್ಡಬಾರದು ಎಂದು ತಿಳಿಸಿದೆ. ಭಾರತದ ಸರ್ವೋಚ್ಚ ನ್ಯಾಯಾಲಯವು 31ನೇ ಜುಲೈ 2015ರಂದು ಹಸಿರು ಪೀಠದ ತೀರ್ಪನ್ನು ಸಮರ್ಥಿಸಿದೆ.

**ವಿಪತ್ತಿನ ಹೆಚ್ಚು ಅಪಾಯಕಾರಿ ಯೋಜನೆಗಳು ಎಲ್ಲಾ ಒಟ್ಟಿಗೆ ಬರಲಿದೆಯೇ?**

ಚಳ್ಳಕೆರೆ ಕಾವಲ್‌ನ 4500 ಎಕರೆ ಪ್ರದೇಶವನ್ನು ರಕ್ಷಣಾ ಸಂಶೋಧನ ಅಭಿವೃದ್ಧಿ ಸಂಸ್ಥೆಯು ಶಸ್ತ್ರಾಸ್ತ್ರಗಳುಳ್ಳ ಡ್ರೋನ್ಸ್ ತಯಾರಿಕೆಗೆ ಮತ್ತು ಪರೀಕ್ಷಿಸಲು ಬದಲಾಯಿಸಲಾಗಿದೆ. ಮತ್ತು ಈ ಚಾಲಕರಹಿತ ವಿಮಾನವನ್ನು ಆಂತರಿಕ ವಿರೋಧವನ್ನು ತಡೆಗಟ್ಟಲು ಉಪಯೋಗಿಸಲಾಗಿದೆ ಎಂದು ನ್ಯಾಯಾಲಯದಲ್ಲಿ ತಿಳಿಸಲಾಗಿದೆ. ಬಾಬಾ ಅಣು ಸಂಶೋಧನಾ ಕೇಂದ್ರ (ಬಿಎಆರ್‌ಸಿ) 1800 ಎಕರೆಯಲ್ಲಿ ರಿಯಾಕ್ಟರ್ ಮತ್ತು ಶಸ್ತ್ರಾಸ್ತ್ರಗಳ ಉತ್ಪಾದನೆಗೆ ಪರಮಾಣು ಇಂಧನ ಸರಬರಾಜು ಮಾಡಲು ವಿಶೇಷ ವಸ್ತು (ಯುರೇನಿಯಂ) ಸೌಲಭ್ಯ ಸ್ಥಾಪಿಸಲು ಪ್ರಸ್ತಾಪಿಸಿದೆ. ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ) ಗೆ ಸಿಂಕ್ರೋಟ್ರಾನ್ ನಿರ್ಮಿಸಲು 1500 ಎಕರೆ ಜಾಗ ನೀಡಿದ್ದರೂ, ಆ ಸೌಲಭ್ಯವನ್ನು ನಿರ್ಮಿಸಲು ಸಂಪನ್ಮೂಲಗಳನ್ನು ಹೊಂದಿಲ್ಲವೆಂದು ಪದೇ ಪದೇ ತಿಳಿಸಿದೆ. ಭಾರತೀಯ ಬಾಹ್ಯಕಾಶ ಸಂಶೋಧನಾ ಸಂಸ್ಥೆಗೆ ಸ್ಪೇಸ್ ಅಪ್ಲಿಕೇಶನ್ ಸೆಂಟರ್ ನಿರ್ಮಿಸಲು 600 ಎಕರೆ ಜಾಗವನ್ನು ನೀಡಲಾಗಿದೆ. (ಯೋಜನೆಯ ಪ್ರಸ್ತಾಪನೆ ಸ್ಪಷ್ಟವಾಗಿರದಿದ್ದರು) ಆಘಾತಕಾರವೆಂದರೆ ಸಾಗಿಟರ್ ಎಂಬ ಖಾಸಗಿ ಘಟಕಕ್ಕೆ ಸೌರ ಪಾರ್ಕನ್ನು ನಿರ್ಮಿಸಲು ಕಾವಲ್‌ನ 1200 ಎಕರೆ ಜಾಗವನ್ನು ಅತ್ಯಲ್ಪ ರೂ. 33 ಲಕ್ಷಕ್ಕೆ (50,000 ಯುಎಸ್ ಡಾಲರ್ಸ್) ಒದಗಿಸಿದೆ. ಮತ್ತು ಈ ಕಂಪನಿಯು ಇತರ ಕೈಗಾರಿಕೆಗಳನ್ನು ಸ್ಥಾಪಿಸಲು ಹೊರಗುತ್ತಿಗೆ ನೀಡುಲು ಪ್ರಸ್ತಾಪಿಸುತ್ತಿದೆ ಎನ್ನಲಾಗಿದೆ. ಮತ್ತು ಇಲ್ಲಿನ 10,000 ಎಕರೆ ಭೂಮಿಯಲ್ಲಿ ಭಾರತೀಯ ಸೇನೆಯು ಬ್ರಿಗೇಡ್‌ನ್ನು ಪತ್ತೆ ಹಚ್ಚಲು ಪ್ರಸ್ತಾಪಿಸಿರುವುದನ್ನು ಹಸಿರು ಪೀಠ ಗಮನಿಸಿದೆ. ಇದರ ಜೊತೆಗೆ ಚಳ್ಳಕೆರೆಯಲ್ಲಿ ಕೈಗಾರಿಕಾ, ನಗರ ಮತ್ತು ಮೂಲಸೌಕರ್ಯ ಯೋಜನೆಗಳನ್ನು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಹೂಡಿಕೆಗಳಿಂದ ಸೇನಾ-ಕೈಗಾರಿಕಾ ನ್ಯೂಕ್ಲಿಯರ್ ಕಾಂಪ್ಲೆಕ್ಸ್ ನಿರ್ಮಿಸಲು ಪ್ರಸ್ತಾಪನೆಯಿದೆ. ಸ್ಥಳೀಯ ಪಂಚಾಯತ್ ಅಥವಾ ಸ್ಥಳೀಯರನ್ನು ಸಂಪರ್ಕಿಸಿಲ್ಲ ಮತ್ತು ಮಾನವ ಹಕ್ಕುಗಳ ನಿರಾಕರಣೆ ಆಗಿರುವುದನ್ನು ಗಮನಿಸಬಹುದು. ಹಸಿರು ಪೀಠವು ಅಪಾಯದ ಅಂಚಿನಲ್ಲಿರುವ ಗ್ರೇಟ್ ಇಂಡಿಯನ್ ಬಸ್ಟರ್ಡ್ (200 ಜೀವಿಗಳು ಮಾತ್ರ ಭಾರತ ಮತ್ತು ಪಾಕಿಸ್ತಾನದಲ್ಲಿ ಬದುಕಿದೆ ಎಂದು ಅಂದಾಜಿಸಲಾಗಿದೆ). ಈ ಹುಲ್ಲುಗಾವಲಿನಲ್ಲಿ ಪ್ರಮುಖವಾದ ಆವಾಸ, ಚೊಟ್ಟನವಿಲಕ್ಕೆ, ಕೃಷ್ಣಮೃಗ ಹಾಗೂ ವೈವಿದ್ಯಮಯ ಸಸ್ಯ ಮತ್ತು ವನ್ಯಜೀವಿಗಳಿಗೆ ಈ ಪರಿಸರ ಆಸರೆ ನೀಡಿದೆ.

**ಮಾಹಿತಿಯನ್ನು ನಿರಾಕರಿಸುವುದುರ ಬಗ್ಗೆ**

ಕಳೆದ 1 ವರ್ಷದ ಅವಧಿಯಲ್ಲಿ ಕರ್ನಾಟಕ ಸರ್ಕಾರ, ಪ್ರಾಜೆಕ್ಟ್ ನಡೆಸುವ ಸಂಸ್ಥೆಗಳನ್ನು ಹಾಗು ಎಂ.ಓ.ಈ.ಎಫ್ ಗಳಿಗೆ ಹಸಿರು ಪೀಟದ ಆದೇಶದ ಪಾಲನೆಯ ಬಗ್ಗೆ ಮಾಹಿತಿ ನೀಡುವಂತೆ ಕೋರಲಾಯಿತು, ಆದರೇ ಅವರಿಂದ ಯಾವುದೇ ಉತ್ತರ ಬರಲಿಲ್ಲ. ಮಾಹಿತಿ ಹಕ್ಕು ಕಾಯ್ದೆಯಡೆ ಸಲ್ಲಿಸಿದ 1 ಅರ್ಜಿಗು ಉತ್ತರ ಬರಲಿಲ್ಲ. ಹಾಗಾಗಿ ಕೇಂದ್ರ ಮಾಹಿತಿ ಹಕ್ಕು ಆಯೋಗಕ್ಕೆ ಮನವಿ ಸಲ್ಲಿಸಲೇಬೇಕಾಯಿತು. ಮಾಹಿತಿ ನೀಡದೇ ಇರುವುದಲ್ಲದೇ , ಹಸಿರು -ಪೀಟದ ಆದೇಶಗಳ ಅಪಾರ್ಥ ಕಲ್ಪಿಸಲು ಪ್ರಯತ್ನಗಳು ನಡೆದವು. ಅಲ್ಲದೇ ಮೇಲ್ಕಂಡ ಪ್ರಾಜೆಕ್ಟ್‌ಗಳ ಪರಿಣಾಮಗಳ ಬಗ್ಗೆ ಗಮನ ಬರದೇ ಇರುವ ಹಾಗೆ ಪ್ರಯತ್ನಗಳು ನಡೆದವು.

ಕೇಂದ್ರ ಮಾಹಿತಿ ಹಕ್ಕು ಆಯೋಗದ ಐತಿಹಾಸಿಕ ಆದೇಶ : ಪ್ರೊ.ಎಂ.ಶ್ರೀಧರ್ ಆಚಾರ್ಯಲು (ಮಧುಭೂಶಿ ಶ್ರೀಧರ್), ಮಾಹಿತಿ ಆಯುಕ್ತರು, ಕೇಂದ್ರ ಮಾಹಿತಿ ಹಕ್ಕು ಆಯೋಗ , 23 ಅಕ್ಟೋಬರ್ 2015 ರಂದು ಐತಿಹಾಸಿಕ ತೀರ್ಪೊಂದು ನೀಡುತ್ತಾ, ಎಂ.ಓ.ಈ.ಎಫ್ ಅನ್ನು ಖಂಡಿಸಿ, ಅಧಿಕಾರಿಗಳ ಮೇಲೆ ದಂಡ ಹಾಕಿ, ಎಂ.ಓ.ಈ.ಎಫ್ , ಕರ್ನಾಟಕ ಸರ್ಕಾರ, ಪ್ರಾಜೆಕ್ಟ್ ನಡೆಸುವ ಸಂಸ್ಥೆಗಳು ಕೂಡಲೇ ಹಸಿರು ಪೀಟದ ಆದೇಶದ ಪಾಲನೆಯ ಬಗ್ಗೆ ಮಾಹಿತಿ ಸಾರ್ವಜನಿಕವಾಗಿ ನೀದುವಂತೆ ಆದೇಶಿಸಿದರು. ಆದೇಶದಲ್ಲಿ, ಎಂ.ಓ.ಈ.ಎಫ್ ಆದೇಶದ ಪಾಲನೆಯ ಬಗ್ಗೆ ಮಾಹಿತಿ ನೀದುವುದನ್ನು ಮಾಹಿತಿ ಹಕ್ಕು ಕಾಯ್ದೆ ಕಲಂ 8(1)(ಎ) ಕೆಳಗೆ ನಿರಾಕರಿಸುವುದು ಸರಿಯಿಲ್ಲ ಹಾಗು ಸೂಕ್ತವಲ್ಲ ಎಂದರು. ಪರಿಸರವನ್ನು ಸಂರಕ್ಷಿಸಲು ನೀಡಿರುವ ಆದೇಶದ ಪಾಲನೆಯ ಬಗ್ಗೆ ಮಾಹಿತಿ ನೀದುವುದರಿಂದ ದೇಶದ ಭದ್ರತೆಗೆ ಹೇಗೆ ಹಾನಿ ಉಂಟಾಗುವುದು ಎಂಬ ನಿಲುವನ್ನು ಸಮರ್ಥಿಸಿಕೊಳ್ಳಲು ಯಾವುದೇ ಸ್ಪಷ್ಟ ಕಾರಣಗಳು ಹಾಗು ಮಾಹಿತಿ ನೀಡದೆ ಇರುವದರ ಬಗ್ಗೆ ಎಂ.ಓ.ಈ.ಎಫ್ ಅಧಿಕಾರಿಗಳನ್ನು ಟೀಕಿಸಿದರು. ಎಂ.ಓ.ಈ.ಎಫ್ ಅಧಿಕಾರಿಗಳಿಗೆ ಅವರು ಕೋರಿರುವ ವಿನಾಯಿತಿಯ (ಮಾಹಿತಿ ಹಕ್ಕು ಕಾಯ್ದೆ ಕಲಂ 8(1)(ಎ) ಅಡಿ) ಪರಿಣಾಮ ಬಗ್ಗೆ ಅವರಿಗೆ ಅರಿವಿದಿಯೇ ಎಂದು ಪ್ರಶ್ನಿಸಿದರು.

ನ್ಯಾಯಾಲಯದ ಆದೇಶದ ಪಾಲನೆ ಬಗ್ಗೆ ಮಾಹಿತಿ ನೀಡುವುದರಿಂದ ದೇಶದ ಭದ್ರತೆಗೆ ಹೇಗೆ ಧಕ್ಕೆ ಆಗುವುದು ಎಂದು ಪ್ರಶ್ನಿಸಿದರು. ಅಲ್ಲದೆ "***It is surprising that well educated CPIOs who are senior Scientists in Environmental sciences have taken this stand without applying their minds to the rights of the people and environmental degradation. The Commission records its displeasure.***" "

ಹಿರಿಯ ವಿಜ್ಞಾನಿಗಳಾದ ಕೇಂದ್ರ ಮಾಹಿತಿ ಹಕ್ಕು ಆಫೀಸರ್ ಗಳು ಪರಿಸರ ನಾಶದ ಬಗ್ಗೆ, ಜನಗಳ ಹಕ್ಕಿನ ಬಗ್ಗೆ ಯೋಚಿಸದೇ ಇರುವುದದನ್ನು ಖಂಡಿಸಿದರು. ಅಲ್ಲದೆ, ಎಂ.ಓ.ಈ.ಎಫ್ ಅಧಿಕಾರಿಗಳಾದ ರೀತಾ ಖನ್ನ ಹಾಗು ವೈ.ಪಿ.ಸಿಂಗ್ ರವರ ಮೇಲೆ 10,000.00 ದಂಡ ವಿಧಿಸಿ, ಅದನ್ನು ಅರ್ಜಿದಾರರಾದ , ಪರಿಸರ ಬೆಂಬಲ ತಂಡದ ಡೇವಿಸ್ ಥಾಮಸ್ ರವರಿಗೆ ಪರಿಹಾರವಾಗಿ ನೀಡಬೇಕೆಂದು ಅದೇಷಿಸಿದರು.

**ಮಾಹಿತಿ ಹಕ್ಕು ಆಯೋಗದ ನಿರ್ಣಯದ ಪರಿಣಾಮ**

ಈ ನಿರ್ಣಯದ ಪರಿಣಾಮವಾಗಿ ಈಗ ಎಂ.ಓ.ಈ.ಎಫ್ ಹಾಗು ಕರ್ನಾಟಕ ಸರ್ಕಾರವು ಅಮೃತ್ ಮಹಾಲ್ ಕಾವಲುಗಳನ್ನು ಉಳಿಸಲು ಯಾವ ಕ್ರಮಗಳನ್ನು ಕೈಗೊಂಡಿದ್ದಾರೆಂದು ಹಾಗು ಗ್ರೇಟ್ ಇಂಡಿಯನ್ ಬಸ್ಟರ್ಡ್ ಅನ್ನು ಉಳಿಸಲು ಯಾವ ಕ್ರಮಗಳನ್ನು ತೆಗೆದುಕೊಂಡಿದ್ದಾರೆಂದು ಸಾರ್ವಜನಿಕವಾಗಿ ತಿಳಿಸಬೆಕಾಗುತ್ತದೆ. ಬೆ.ಎ.ಆರ್.ಸಿ ಹಾಗು ಐ.ಎಸ್.ಆರ್.ಓ ಸಂಸ್ಥೆಗಳು ಎನ್ವಿರಾನ್ಮೆಂಟ್ಲ್ ಕ್ಲಿಯರೆನ್ಸ್ ಪಡೆಯಲು ಸಲ್ಲಿಸಿರುವ ಅರ್ಜಿಗಳನ್ನು, ಹಾಗು ಕ್ಲಿಯರೆನ್ಸ್ ಪಡೆದಿದ್ದರೆ ಅದರ ಪ್ರತಿಗಳನ್ನು ಸಾರ್ವಜನಿಕವಾಗಿ ಹಂಚಿಕೊಳ್ಳಬೇಕಾಗುತ್ತದೆ. ಎಂ.ಓ.ಈ.ಎಫ್ , ಈ ಸಂಸ್ಥೆಗಳು ಹಂಚಿರುವ ಮಾಹಿತಿ ಸರಿಯಿದಯೆ ಎಂದು ಪರಿಶೀಲಿಸ ಬೇಕಾಗುತ್ತದೆ. ಎಂ.ಓ.ಈ.ಎಫ್ ಹಾಗು ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ಮಂಡಳಿಯು, ಅವರು ನೀದಿರುವ ಕ್ಲಿಯರೆನ್ಸ್ ಗಳು ಹಸಿರು ಪೀಟದ ಅದೇಶದಂತೆ ನೀಡಲಾಗಿದಿಯೆ ಎಂದು ತಿಳಿಸಬೇಕಾಗಿದೆ. ಸ್ಯಾಜಿಟಾರ್ ಸಂಸ್ಥೆ ಸಂಭಂದ ಪಟ್ಟಂತೆ , ಹಸಿರು ಪೀಟದ ಆದೇಶದಲ್ಲಿ ನಿರ್ದೇಶಿಸಿದಂತೆ , ಆ ಸಂಸ್ಥೆಗೆ ನೀಡಲಾದ ಕ್ಲಿಯರೆನ್ ಅನ್ನು ಮರುಪರಿಶೀಲನೆ ಮಾಡಲಾಗಿದೆಯೇ ಎಂದು ತಿಳಿಸಬೇಕಾಗುತ್ತದೆ. ಐ.ಐ.ಎಸ್.ಸಿ ಹಾಗು ಕೆ.ಎಸ್ಸ್.ಎಸ್ಸ್.ಐ.ಡಿ.ಸಿ ಸಹ ಹಸಿರು ಪೀಟದ ಆದೇಶವನ್ನು ಪಾಲನೆಯ ಬಗ್ಗೆ , ಅಂದರೆ ಅಲ್ಲಿನ ನಿವಾಸಿಗಳಿಗೆ ಕಾವಲು ಗಳಲ್ಲಿರುವ ನೀರಿನ ಮೂಲಗಳು ಹಾಗು ಇತರೆ ಸಾಂಸ್ಕೃತಿಕ ಹಾಗು ಜಿವನೋಪಾಯ ಸಂಭಂದ ಚಟುವತಿಕೆಗಳಿಗೆ ಕಾವಲುಗಳಿಗೆ ಪ್ರವೇಶಮಾಡಲು ಅವಕಾಷ ನೀಡಿದ್ದಾರೆಯೆ ಎಂದು ಮಾಹಿತಿ ಹಂಚಿಕೊಳ್ಳಬೇಕಾಗಿದೆ. ಬೆ.ಎ.ಆರ್.ಸಿ ಸಂಸ್ಥೆಯು ಸಹ ತನಗೆ ಮಂಜೂರಾದ ಭೂಮಿಯಲ್ಲಿ ಸ್ಥಳೀಯರಿಗೆ ಪ್ರವೇಶಮಾಡಲು ಅವಕಾಶ ಮಾದಿದೆಯೆ ಎಂದು ತಿಳಿಸಬೇಕಾಗಿದೆ, ಹಾಗೆಯೆ ಐ.ಐ.ಎಸ್.ಸಿ ಹಾಗು ಬಿ.ಈ.ಆರ್.ಸಿ , ಸ್ಥಳೀಯ್ರಿಗೆ ಕಾವಲು ಪ್ರವೇಶಿಸಲು ಯಾವ ಯೋಜನೆ ಮಾಡಿದ್ದಾರೆಂದು ತಿಳಿಸಬೇಕಾಗಿದೆ. ಹಾಗೆಯೆ, ಐ.ಎಸ್.ಆರ್.ಓ ಸಂಸ್ಥೆಗೆ, ಅರ್ಜಿದಾರರು, ಅವರಿಗೆ ಮಂರ್ಝೂರಾದ ಭೂಮಿಯನ್ನು ಪ್ರವೇಶಿಸಿ ಅದರಲ್ಲಿ ನೀರಿನ ಮಾಲಗಳ ಬಗ್ಗೆ ಪರೀಷೀಲನ ಮಾಡಲು ಅವಕಾಷ ನೀಡಲು ಆದೇಶಿಸಿದ್ದಾರೆ.

**ಹಸಿರು ಪೀಟದ ಆದೇಶದ ಬಗ್ಗೆ ಅರಿವೇ ಇಲ್ಲ ಎಂಬ ನಿಲುವ ಖಂಡನೆ**

ಎಂ.ಓ.ಈ.ಎಫ್ ಅಧಿಕಾರಿ ವೈ.ಪಿ.ಸಿಂಘ , ಹಸಿರು ಪೀಟದ ಆದೇಶದ ಬಗ್ಗೆ ಅರಿವೇ ಇಲ್ಲ ಎಂದು ತೆಗೆದುಕೊಂದಿರುವ ನಿಲುವನ್ನು ಮಾಹಿತಿ ಹಕ್ಕು ಆಯುಕ್ತರು ತೀವ್ರವಾಗಿ ಖಂಡಿಸಿದರು. ಅಲ್ಲದೆ, ಎಂ.ಓ.ಈ.ಎಫ್ ಗೆ , ತನ್ನ ಮಾಹಿತಿ ಹಕ್ಕು ಅಧಿಕಾರಿಗಳಿಗೆ ಮಾಹಿತಿ ಹಕ್ಕು ಖಾಯ್ದೆ, ಹಾಗು ಪರಿಸರ ಸಂರಕ್ಶಣೆ ಖಾಯ್ದೆಯ ಬಗ್ಗೆ ಸೂಕ್ತ ತರಬೇತಿ ನೀಡುವುದಾಗೆ ತಿಳಿಸಿದರು.

ಸಿ.ಐ.ಸಿ ನಿರ್ಣಯವು ಕಾನೂನಿನ ಮೆಲೆ ಇದ್ದ ಭರವಸೆಯನ್ನು ಮರುಸ್ಥಾಪಿಸಿದೆ ಮೇಲ್ಕಂಡ ನಿರ್ಣಯದಿಂದ ಸ್ಥಳೀಯ ನಿವಾಸಿಗಳಿಗೆ ಕಾನೂನಿನ ಮೇಲಿದ್ದ ಭರವಸೆ ಮರು ಸ್ಥಾಪಿಸಿ, ನ್ಯಾಯಯುತವಾಗಿ ಸಿಗಬೇಕಾಗಿರುವ ಹಕ್ಕಿಗಳಿಗಾಗಿ ಹೋರಾಟಕ್ಕೆ ಹೊಸ ಶಕ್ತಿ ನೀಡದಂತಿದೆ. ಹಾಗೆಯೆ, ಡಿ.ಆರ್.ಡಿ.ಓ, ಐ.ಐ.ಎಸ್.ಸಿ, ಬೆ.ಎ.ಆರ್.ಸಿ ಅಂಥ ಸಂಸ್ಥೆಗಳು , ಭದ್ರತೆ ಬಗ್ಗೆ ಕೆಲಸ ಮಾಡುವ ಒಂದೇ ಕಾರಣಕ್ಕೆ , ಕಾನೂನ , ಸಂವಿಧಾನ ಅವರಿಗೆ ಅನ್ವಯಿಸುವುದಿಲ್ಲ ಎಂತಿದ್ದ ಭಾವನೆಯನ್ನು ದೂರ ಮಾದಿದೆ.

**ದೊಡಉಳಾರ್ಥಿ ಕರಿಯಣ್ಣ, ಹನುಮಂತರಾಯ ಲಿಯೊ ಎಫ್ ಸಾಲ್ಡಾನಾ ಭಾರ್ಗವಿ ಎಸ್ ರಾವ್ ವಿನಯ್ ಶ್ರೀನಿವಾಸ**

ಅಮ್ರಿತ್ ಮಹಲ್ ಕಾವಲ್
ಹಿತರಕ್ಷಣಾ ಸಮಿತಿ
ದೊಡ್ಡಉಲಾರ್ಥಿ, ಚಳ್ಳಕೆರೆ,
ಚಿತ್ರದುರ್ಗ.

ದೊಡ್ಡ ಉಳಾರ್ಥಿ ಕರಿಯಣ್ಣ
– 9900954664
ಹನುಮಂತರಾಯಣ್ಣ
9901084588

ಪರಿಸರ ಬೆಂಬಲ ತಂಡ
1572, 36 ಅಡ್ಡ ರಸ್ತೆ,
ರಿಂಗ್ ರಸ್ತೆ, ಬೆಂಗಳೂರು
– 70. Tel: 91-80-26713559-61
Voice/Fax: 91-80-26713316
esg@esgindia.org
www.esgindia.org

122/4, ಇನ್ಫೆಂಟ್ರಿ ರಸ್ತೆ,
ಬೆಂಗಳೂರು – 1.
9880595032

Note: Amrit Mahal Kaval Hitarakshana Horata Samithi has produced a docufilm on the ongoing struggle to protect Challakere's Amrit Mahal Kaval. Entitled "Beerappa's Angst" (English; 39 mins) and "Beerappana Tallana" (Kannada; 32 mins), the film may be viewed online. Details at: http://tinyurl.com/nlvzcq6

Comprehensive information on the legal and campaign efforts to protect Challakere's Amrit Mahal Kavals, including documentation provided in the National Green Tribunal, are accessible at: http://tinyurl.com/mjhdqar